# ಸುದ್ದಿ ಸಂಚಯ

## ಶ್ರೀರಾಮಕೃಷ್ಣ ಅದ್ಭುತಾನಂದ ಆಶ್ರಮ

ಛಪರಾ(ಬಿಹಾರ್) ದಲ್ಲಿನ ಶ್ರೀರಾಮಕೃಷ್ಣ ಅದ್ಭುತಾನಂದ ಆಶ್ರಮಕ್ಕೆ ಶ್ರೀರಾಮನವಮಿ (ಏಪ್ರಿಲ್ ೧೧) ಐತಿಹಾಸಿಕ ಮಹತ್ತ್ವದ ಪುಣ್ಯದಿನ. ಕಾರಣ ಅಂದು ಆ ಆಶ್ರಮವು ಅಂತರ‍್ರಾಷ್ಟ್ರೀಯ ವಿಖ್ಯಾತ ರಾಮಕೃಷ್ಣ ಮಿಷನ್ನಿನಲ್ಲಿ ಸೇರ್ಪಡೆಯಾಯಿತು. ರಾಮಕೃಷ್ಣ ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಪರಮ ಪೂಜ್ಯ ಶ್ರೀಮತ್ ಸ್ವಾಮಿ ಸ್ಮರಣಾನಂದಜಿಯವರು ವಿಧಿಪೂರ್ವಕವಾಗಿ ಅಂದು ಆ ಆಶ್ರಮವನ್ನು ಸ್ವೀಕರಿಸಿದರು. ಸಹಾಯಕ ಕಾರ್ಯದರ್ಶಿ, ಶ್ರೀಮತ್ ಸ್ವಾಮಿ ಸುಹಿತಾನಂದಜಿ ಮಹಾರಾಜ್‌ರವರು, ಬಿಹಾರ್ ಸರಕಾರದ ಮುಖ್ಯ ಸಚಿವರಾದ ಶ್ರೀಯುತ ಎಸ್.ಎನ್. ವಿಶ್ವಾಸ್ (ಐ.ಎ.ಎಸ್) ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮೂರು ದಿನಗಳ (ಏಪ್ರಿಲ್ ೧೧, ೧೨ ಮತ್ತು ೧೩) ಈ ಧಾರ್ಮಿಕ ಸಮಾವೇಶವು ಭಾಗವಹಿಸಿದ್ದ ಎಲ್ಲರಲ್ಲೂ ಆಧ್ಯಾತ್ಮಿಕ ಧನ್ಯತೆಯ ಭಾವವನ್ನು ಮೂಡಿಸಿತು. ಇಲ್ಲಿ ಸ್ಮರಿಸಬೇಕಾದ ವಿಷಯವೆಂದರೆ ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಅದ್ಭುತಾನಂದರು ಹುಟ್ಟಿದ ಪ್ರದೇಶ ಛಪರಾ. ✻

## ಬೆಳಗಾವಿಯಲ್ಲಿ ಸಾಧುನಿವಾಸದ ಉದ್ಘಾಟನೆ

ಬೆಳಗಾವಿಯಲ್ಲಿರುವ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಹೊಸದಾಗಿ ನಿರ್ಮಾಣಗೊಂಡ ಸಾಧುನಿವಾಸದ ಉದ್ಘಾಟನೆಯನ್ನು ನೆರವೇರಿಸಲಾಯಿತು. ಇದಕ್ಕೆ ಸಂಬಂಧಪಟ್ಟಂತೆ ಏಪ್ರಿಲ್ ೧೭ ಮತ್ತು ೧೮ರಂದು ವಿಶೇಷ ಕಾರ್ಯಕ್ರಮಗಳಿದ್ದವು. ೧೭ರಂದು ನಡೆದ ಸಾರ್ವಜನಿಕ ಸಭೆಯಲ್ಲಿ ಬೆಂಗಳೂರು ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದರು ಕನ್ನಡದಲ್ಲಿಯೂ ನಾಗಪುರ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಸ್ಥಾನಂದರು ಮತ್ತು ಪುಣೆ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಭೌಮಾನಂದರು ಮರಾಠಿಯಲ್ಲಿಯೂ ಮಾತನಾಡಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದರು ಹಿಂದಿಯಲ್ಲಿ ಮಾತನಾಡಿದರು. ಪ್ರಾರಂಭದಲ್ಲಿ ಬೆಳಗಾವಿ ಆಶ್ರಮದ ಮುಖ್ಯಸ್ಥರಾದ ಸ್ವಾಮಿ ಪುರುಷೋತ್ತಮಾನಂದರು ಭಜನೆಯನ್ನು ಹಾಡಿದರು ಮತ್ತು ಎಲ್ಲರನ್ನೂ ಸ್ವಾಗತಿಸಿದರು. ಸುಮಾರು ಎರಡು ಸಾವಿರ ಜನ ಸಭೆಯಲ್ಲಿ ಭಾಗವಹಿಸಿದ್ದರು.

೧೮ರಂದು ಬೆಳಗ್ಗೆ ವಾಸ್ತುಪ್ರವೇಶ, ಶ್ರೀಸೂಕ್ತ ಹವನ, ಶ್ರೀರಾಮಕೃಷ್ಣ ವಿಶೇಷ ಪೂಜೆ ಮತ್ತು ಹೋಮ ಇತ್ಯಾದಿ ಕ್ರಿಯಾವಿಧಿಗಳೊಂದಿಗೆ ಉದ್ಘಾಟನೆಯ ಸಮಾರಂಭವು ನಡೆಯಿತು. ಸ್ವಾಮಿ ಸ್ಮರಣಾನಂದಜಿಯವರು ಸಾಧು ನಿವಾಸವನ್ನೂ ಕರ್ನಾಟಕದ ಮಾನ್ಯ ರಾಜ್ಯಪಾಲರಾದ ಶ್ರೀ ಟಿ.ಎನ್. ಚತುರ್ವೇದಿಯವರು ಶ್ರೀಶಾರದಾ ಮಂಟಪವನ್ನೂ ಉದ್ಘಾಟಿಸಿದರು. ಅನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಮೊದಲಾದವರು ಮಾತನಾಡಿದರು. ಎರಡು ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು. ಅದೇ ದಿನ ಸಂಜೆ ನಡೆದ ವಿಶೇಷ ಸತ್ಸಂಗದಲ್ಲಿ ಕರ್ನಾಟಕದ ಮಾನ್ಯ ಮಂತ್ರಿಗಳಾದ ಶ್ರೀ ಎಚ್.ಕೆ. ಪಾಟೀಲರೂ ಗದಗಿನ ವಿಧಾನಸಭಾ ಸದಸ್ಯರಾದ ಶ್ರೀ ಡಿ.ಆರ್. ಪಾಟೀಲರೂ ಮಾತನಾಡಿದರು. ಅಂದಿನ ವಿಶೇಷ ಆಕರ್ಷಣೆ ಸುರ್ಮಾನಿ ಪ್ರವೀಣ್ ಗೋಡ್‌ಖಿಂಡಿ, ಬೆಂಗಳೂರು, ಇವರಿಂದ ಕೊಳಲು ವಾದನ. ಪಂಡಿತ್ ರವೀಂದ್ರ ಯಾವಗಲ್ ಅವರಿಂದ ತಬಲ. ಐವತ್ತು ಜನ ಸಾಧು ಬ್ರಹ್ಮಚಾರಿಗಳು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ✻

## ಮೈಸೂರಿನಲ್ಲಿ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಿಂದ ನೂತನ ಪುಸ್ತಕಗಳ ಬಿಡುಗಡೆ

ಮೈಸೂರಿಗೆ ಆಗಮಿಸಿದ್ದ ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್ನಿನ ಉಪಾಧ್ಯಕ್ಷರಾದ ಪರಮ ಪೂಜನೀಯ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜೀಯವರು "ಮಕ್ಕಳಿಗೆ ಒಳ್ಳೆಯ ಸಾಹಿತ್ಯವನ್ನು ಒದಗಿಸುವುದರಲ್ಲಿ ಶ್ರೀ ರಾಮಕೃಷ್ಣ ಆಶ್ರಮದ ಪ್ರಯತ್ನ ಬಹಳ ಶ್ಲಾಘನೀಯವಾದುದು. ವಿಶೇಷವಾಗಿ ಇಂದಿನ ದಿನಗಳಲ್ಲಿ ಕೀಳು ಸಾಹಿತ್ಯ ಮತ್ತು ಚಿತ್ರಗಳು ಮಕ್ಕಳ ಮನಸ್ಸನ್ನು ಮಲಿನಗೊಳಿಸುತ್ತಿರುವ ಸನ್ನಿವೇಶದಲ್ಲಿ ಮಕ್ಕಳಿಗಾಗಿ ಕಥೆಗಳು, ನಿದರ್ಶನಗಳು, ಚಿತ್ರಗಳ ಮೂಲಕ ಒಳ್ಳೆಯ ಸಾಹಿತ್ಯವನ್ನು ಒದಗಿಸುವ ಅಗತ್ಯವಿದೆ" ಎಂದು ನುಡಿದರು. ಮೈಸೂರಿನ ಯಾದವಗಿರಿಯಲ್ಲಿನ ಶ್ರೀರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ೫ ಹೊಸ ಪ್ರಕಟನೆಗಳನ್ನು ಏಪ್ರಿಲ್ ೨೦ರ ಭಾನುವಾರದಂದು ಪೂಜ್ಯ ಸ್ವಾಮೀಜಿಯವರು ಬಿಡುಗಡೆಮಾಡಿ ಆಶೀರ್ವಚನ ನೀಡಿದರು. ✻

## ಹೈದರಾಬಾದ್‌ನ ರಾಮಕೃಷ್ಣ ಮಠದಲ್ಲಿ ಸಂತ ದರ್ಶನ, ವಿಚಾರಗೋಷ್ಠಿ ಕಾರ್ಯಕ್ರಮ

ಭಾರತದ ಆಧ್ಯಾತ್ಮಿಕ ಪರಂಪರೆಯನ್ನು ಶ್ರೀಮಂತಗೊಳಿಸಿದ ಆಚಾರ್ಯರು, ಭಾಗವತೋತ್ತಮರು, ಸಂತರು—ಇವರ ಜೀವನ, ವಿಚಾರಧಾರೆಯನ್ನು ಕುರಿತು ಏಪ್ರಿಲ್ ೨ರಿಂದ ೩೦ರವರೆಗೂ ಒಂದು ತಿಂಗಳು ಕಾಲ ಹೈದರಾಬಾದ್‌ನ ರಾಮಕೃಷ್ಣ ಮಠದ ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ಎಕ್ಸಲೆನ್ಸ್‌ನ ಸಭಾಂಗಣದಲ್ಲಿ ಆಧ್ಯಾತ್ಮಿಕ ಪ್ರವಚನದ ಅಮೃತ ವರ್ಷವನ್ನು ನಾಡಿನ ಸುಪ್ರಸಿದ್ಧ ಮೇಧಾವಿಗಳು ಹರಿಸಿದರು.

ಇದೇ ಸಭಾಂಗಣದಲ್ಲಿ **"ಇಂದಿನ ವಾಣಿಜ್ಯಸಂಸ್ಥೆಯ ಸವಾಲುಗಳು—ಪುರಾತನ ಭಾರತದ ಪರಿಹಾರಗಳು"**—ಎಂಬ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ವಿಶೇಷವಾದ ವಿಚಾರಗೋಷ್ಠಿಯನ್ನು ಏಪ್ರಿಲ್ ೧೨ರಂದು ಇನ್ಸೂರೆನ್ಸ್ ರೆಗ್ಯುಲೇಟರಿ ಅಂಡ್ ಡೆವಲಪ್‌ಮೆಂಟ್ ಪ್ರಾಧಿಕಾರದ ಛೇರ್‌ಮನ್ ಶ್ರೀ ಎನ್. ರಂಗಾಚಾರಿಯವರು ಉದ್ಘಾಟಿಸಿದರು. ರಾಜಕೋಟ್ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಜಿತಾತ್ಮಾನಂದಜಿಯವರೂ ಸೇರಿದಂತೆ ದೇಶದ ಅನೇಕ ಸಂಪನ್ಮೂಲ ವ್ಯಕ್ತಿಗಳು ಇದರಲ್ಲಿ ಭಾಗವಹಿಸಿದ್ದರು. ✻